# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:ಹಿರಿಯೂರು ಮತ್ತು ಚಳ್ಳಕೆರೆ ತಾಲ್ಲೂಕಿನಲ್ಲಿ ಜಲಾನಯನ ಅಭಿವೃದ್ಧಿ ಕಾಮಗಾರಿಗಳಲ್ಲಿನ ಅವ್ಯವಹಾರದ ಬಗ್ಗೆ- ಶಿಸ್ತು ಕ್ರಮ ಕುರಿತು.

ಓದಲಾಗಿದೆ:

1. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ಪತ್ರ ಸಂಖ್ಯೆ:ಜಅಇ/ಆಡಳಿತ-3/ ವಿನಿ-6/67/2005-06, ದಿನಾಂಕ:21-08-2006.
2. ಸರ್ಕಾರದ ಪತ್ರ ಸಂಖ್ಯೆ:ಕೃತೋಇ 72 ಕೃಪವಿ 2006, ದಿನಾಂಕ:07-03-2007,
3. ಸರ್ಕಾರದ ಆದೇಶ ಸಂಖ್ಯೆ:ಕೃತೋಇ 72 ಕೃಪವಿ 2006, ದಿನಾಂಕ:21-07-2007,
4. ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ:05-03-2012.

ಪ್ರಸ್ತಾವನೆ :

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಮತ್ತು ಚಳ್ಳಕೆರೆ ತಾಲ್ಲೂಕಿನಲ್ಲಿ 2005-06ನೇ ಸಾಲಿನ ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ ಮತ್ತು ಡಿ.ಪಿ.ಎ.ಪಿ. ಯೋಜನೆಯಡಿ ಅರಣ್ಯ ಘಟಕದ ಕಾಮಗಾರಿ ಗಳಿಗೆ ಅಂದಾಜು ಪತ್ರಿಕೆ ಮಂಜೂರಾಗದೇ ಇದ್ದರೂ ಸಹ ವಿವಿಧ ಸಂಘಗಳಿಂದ ಮುಂಗಡವನ್ನು ಪಡೆದು ಕಾಮಗಾರಿ ನಿರ್ವಹಿಸಲಾಗಿದೆ. ಮತ್ತು ಸಂಘಗಳಿಂದ ಪಡೆದ ಮುಂಗಡ ಹಣಕ್ಕೆ ಅನುಗುಣವಾಗಿ ನಗದು ಪುಸ್ತಕ, ಅಳತೆ ಪುಸ್ತಕ ಹಾಗೂ ಕೂಲಿಕಾರರಿಗೆ ಹಣ ಪಾವತಿಸಿರುವ ಬಗ್ಗೆ ಓಚರ್ಸ್‌ಗಳನ್ನು ಸಹ ತನಿಖೆಗೆ ಹಾಜರುಪಡಿಸದೆ, ಅನುಷ್ಠಾನಗೊಳಿಸಲಾದ ಕಾಮಗಾರಿಗಳನ್ನು ಯೋಜನೆಯ ಉದ್ದೇಶಕ್ಕೆ ವಿರುದ್ಧವಾಗಿ ನಿರ್ವಹಿಸಿ ಸರ್ಕಾರದ ಹಣ ದುರುಪಯೋಗಕ್ಕೆ ಕಾರಣರಾಗಿರುತ್ತಾರೆಂದು ಈ ಕೆಳಕಂಡ ಅಧಿಕಾರಿ/ನೌಕರರುಗಳ ಮೇಲೆ ಜಂಟಿ ಇಲಾಖಾ ವಿಚಾರಣೆಯನ್ನು ಹೂಡಲು ಮೇಲೆ ಓದಲಾದ ಕ್ರಮ ಸಂಖ್ಯೆ:(1)ರ ಪತ್ರದಲ್ಲಿ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು, ಇವರು ದೋಷಾರೋಪಣಾ ಪಟ್ಟಿಯೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

1) ಶ್ರೀ ಎಂ.ಅಸ್ಲಂ, ಕೃಷಿ ಅಧಿಕಾರಿ,
2) ಶ್ರೀ ಜಿ. ಶ್ರೀಕಂಠನ್, ಕೃಷಿ ಅಧಿಕಾರಿ(ನಿವೃತ್ತ)
3) ಶ್ರೀ ಎಂ.ಪಾಂಡುರಂಗಪ್ಪ, ವಲಯ ಅರಣ್ಯಾಧಿಕಾರಿ,
4) ಶ್ರೀ ಕೆ.ಬಿ ರಾಮಸ್ವಾಮಿ, ಸಹಾಯಕ ಕೃಷಿ ಅಧಿಕಾರಿ(ನಿವೃತ್ತ)
5) ಶ್ರೀ ಕೆ.ಎಸ್. ಜಯಕುಮಾರ್, ಕೃಷಿ ಸಹಾಯಕ,
6) ಶ್ರೀ ಮುದ್ದುಕೃಷ್ಣಪ್ಪ, ಕೃಷಿ ಸಹಾಯಕ,
7) ಶ್ರೀ ಗೌಸ್ ಮೊಹಿದ್ದೀನ್, ಸಹಾಯಕ ಕೃಷಿ ಅಧಿಕಾರಿ(ಈಗ ನಿವೃತ್ತ)
8) ಶ್ರೀ ಕೆ. ದಾಸೇಗೌಡ, ಕೃಷಿ ಸಹಾಯಕ(ಈಗ ನಿವೃತ್ತ).
9) ಶ್ರೀ ಚಿಕ್ಕಲಿಂಗೇಗೌಡ, ಕೃಷಿ ಸಹಾಯಕ,

29

10) ಶ್ರೀ ಹೆಚ್. ಮುಸ್ತೂರಪ್ಪ, ಕೃಷಿ ಸಹಾಯಕ,
11) ಶ್ರೀ ಸಿ. ಓಂಕಾರಯ್ಯ, ಕೃಷಿ ಸಹಾಯಕ,

ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆರವರು ಕಳುಹಿಸಿರುವ ಪ್ರಸ್ತಾವನೆಯಂತೆ ಮೇಲ್ಕಂಡ ಅಧಿಕಾರಿ/ನೌಕರರ ವಿರುದ್ಧ ಕ.ನಾ.ಸೇ.(ಸಿ.ಸಿ.ಎ) ನಿಯಮಾವಳಿ 1957ರ ನಿಯಮ 11ರಡಿಯಲ್ಲಿ ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಕಾರಣ ಕೇಳುವ ಪತ್ರವನ್ನು ಆಪಾದನಾ ಪಟ್ಟಿಯೊಂದಿಗೆ ಜಾರಿ ಮಾಡಿ, ಸದರಿ ಆಪಾದನೆಗಳಿಗೆ ಅವರುಗಳು ನೀಡಿದ ಹೇಳಿಕೆಗಳನ್ನು ಪರಿಶೀಲಿಸಿದ ನಂತರ ಪ್ರಕರಣದಲ್ಲಿ ಸತ್ಯಾಸತ್ಯಗಳನ್ನು ಕಂಡುಕೊಳ್ಳಲು ಮೇಲೆ ಕ್ರಮಾಂಕ(3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಎನ್. ಪ್ರಹ್ಲಾದಾಚಾರ್ಯ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯಾಗಿ ಮತ್ತು ಆಡಳಿತಾಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಿತ್ರದುರ್ಗ, ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಗಿತ್ತು.

ಕ್ರಮಾಂಕ(4)ರಲ್ಲಿ ಓದಲಾದ ದಿನಾಂಕ:05-03-2012ರ ಪತ್ರದೊಂದಿಗೆ ವಿಚಾರಣಾಧಿಕಾರಿಯವರು ಪ್ರಕರಣದಲ್ಲಿನ ಮೇಲ್ಕಂಡ ಅಧಿಕಾರಿ/ನೌಕರರ ಮೇಲೆ ವಿಚಾರಣೆ ನಡೆಸಿ ವರದಿಯನ್ನು ನೀಡಿರುತ್ತಾರೆ. ಅವರು ತಮ್ಮ ವರದಿಯಲ್ಲಿ ಯಾರೊಬ್ಬರ ಮೇಲಿನ ಆರೋಪಗಳು ಸಾಬೀತಾಗಿರುವುದಿಲ್ಲವೆಂದು, ಹಾಗಾಗಿ ಅವರುಗಳು ದಂಡನೆಗೆ ಅರ್ಹರಾಗುವುದಿಲ್ಲವೆಂದು ಅಭಿಪ್ರಾಯ ಪಡುತ್ತೇನೆಂದು ನಿರ್ಣಯ ನೀಡಿ ಈ ಕೆಳಕಂಡಂತೆ ವರದಿಯನ್ನು ನೀಡಿರುತ್ತಾರೆ.

ಅವರು ತಮ್ಮ ವರದಿಯಲ್ಲಿ ವಿಚಾರಣೆಗೆ ಗುರಿಪಡಿಸಿದ ಆರೋಪಿತ ಅಧಿಕಾರಿಗಳ ಪೈಕಿ (1) ಶ್ರೀ ಜಿ. ಶ್ರೀಕಂಠನ್, (2) ಶ್ರೀ ಕೆ.ಬಿ. ರಾಮಸ್ವಾಮಿ, (3) ಶ್ರೀ ಮುದ್ದುಕೃಷ್ಣಪ್ಪ, (4)ಶ್ರೀ ಹೆಚ್. ಮುಸ್ತೂರಪ್ಪ, ಮತ್ತು (5) ಶ್ರೀ ಸಿ. ಓಂಕಾರಯ್ಯರವರುಗಳು ಸೇವೆಯಿಂದ ನಿವೃತ್ತರಾಗಿದ್ದು, ಅವರ ವಿರುದ್ಧದ ವಿಚಾರಣಾ ಕ್ರಮವನ್ನು 2007ನೇ ಸಾಲಿನಲ್ಲಿ, ಇತರೆ 6 ಅಧಿಕಾರಿಗಳೊಂದಿಗೆ ಪ್ರಾರಂಭಿಸಲಾಗಿದ್ದು, ನಿವೃತ್ತರಾದ ಅಧಿಕಾರಿಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214(2) (ಬಿ)ರನ್ವಯ 4 ವರ್ಷಗಳ ಪೂರ್ವದಲ್ಲಿ ನಡೆದ ಘಟನೆಯ ಕುರಿತು ಇಲಾಖಾ ಕ್ರಮ ಜರುಗಿಸುವಂತಿಲ್ಲ ಎಂದು ಹೇಳಿರುವುದರಿಂದ ಪ್ರಸ್ತುತ ಪ್ರಕರಣದಲ್ಲಿ ನಿವೃತ್ತರಾದ ಆರೋಪಿತ ಅಧಿಕಾರಿಗಳು ಸೇರಿದಂತೆ ಎಲ್ಲಾ ಆರೋಪಿತ ಅಧಿಕಾರಿಗಳ ವಿರುದ್ಧ ಘಟನೆ ನಡೆದ 4 ವರ್ಷಗಳ ಅವಧಿಯೊಳಗಾಗಿ ಇಲಾಖಾ ಕ್ರಮ ಪ್ರಾರಂಭಿಸಲಾಗಿರುವುದರಿಂದ ಆರೋಪಿತ ಅಧಿಕಾರಿಗಳ ಪರ ರಕ್ಷಣಾ ಸಹಾಯಕರ ವಾದವನ್ನು ತಾವು ಒಪ್ಪುವುದಿಲ್ಲವೆಂದು ವಿಚಾರಣಾಧಿಕಾರಿಗಳು ತಿಳಿಸಿರುತ್ತಾರೆ.

ಹಾಗೂ ಸೇವೆಯಲ್ಲಿರುವ ಶ್ರೀ ಗೌಸ್ ಮೊಹಿದ್ದೀನ್, ಇವರು ಕೃಷಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅವರು ಎಸಗಿದ ಅಕ್ರಮಗಳಿಗೆ ಸಂಬಂಧಿಸಿದಂತೆ ದಿ:07-03-2007ರ ಕಾರಣ

ಕೇಳುವ ನೋಟೀಸ್‌ನ್ನು ಜಾರಿಗೊಳಿಸುವ ಪೂರ್ವದಲ್ಲಿ ಅವರಿಗೆ ಸಹಾಯಕ ಕೃಷಿ ಅಧಿಕಾರಿ ವೃಂದಕ್ಕೆ ಸ್ವತಂತ್ರ ಪ್ರಭಾರದಲ್ಲಿರಿಸಿರುವುದರಿಂದ ಅವರ ಮೇಲಿನ ಆರೋಪವನ್ನು ಮಾಫಿ ಮಾಡಿದಂತಾಗುತ್ತದೆ ಎಂಬುದಾಗಿ ವರದಿ ನೀಡಿರುತ್ತಾರೆ.

ಶ್ರೀ ಎಂ. ಪಾಂಡುರಂಗಪ್ಪ ಇವರು, ಅರಣ್ಯ ಇಲಾಖೆಯಿಂದ ಎರವಲು ಸೇವೆಯ ಮೇಲೆ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಅವರನ್ನು ದಿನಾಂಕ:19-05-2006ರಂದು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಚಿತ್ರದುರ್ಗ ಇವರು ಬಿಡುಗಡೆಗೊಳಿಸಿರುತ್ತಾರೆ. ಹೀಗಾಗಿ ಸದರಿಯವರು ಕೃಷಿ ಇಲಾಖೆಯ ಆಡಳಿತ ನಿಯಂತ್ರಣದಿಂದ ಬಿಡುಗಡೆಯಾಗಿರುವುದರಿಂದ ಅವರ ವಿರುದ್ಧ ಕೃಷಿ ಇಲಾಖೆಯು ಶಿಸ್ತು ಕ್ರಮ ಪ್ರಾರಂಭಿಸಲು ಬರುವುದಿಲ್ಲವೆಂಬುವುದಾಗಿ ವರದಿ ನೀಡಿರುವುದಲ್ಲದೇ, ಶಿಸ್ತು ಪ್ರಾಧಿಕಾರದ ಪರವಾಗಿ ಸಾಕ್ಷಿ ನೀಡಿದ ಶ್ರೀ ರಾಜಣ್ಣ, ಅಪರ ಕೃಷಿ ನಿರ್ದೇಶಕರು, (ಪ್ರಕರಣದ ತನಿಖಾಧಿಕಾರಿ)ರವರ ಹೇಳಿಕೆಗಳು ಸದರಿಯವರ ವಿರುದ್ಧದ ದೋಷಾರೋಪಣೆಗಳನ್ನು ಸಾಬೀತುಪಡಿಸಲು ಸಹಕಾರಿಯಾಗಿಲ್ಲ. ಅವರು ದಿ:13-09-2005ರಿಂದ 16-09-2005ರವರೆಗೆ ಹಿರಿಯೂರು ಮತ್ತು ಚಳ್ಳಕೆರೆ ತಾಲ್ಲೂಕುಗಳಲ್ಲಿ ಪ್ರವಾಸ ಕೈಗೊಂಡು 2005-06ನೇ ಸಾಲಿನಲ್ಲಿ ನಿರ್ವಹಿಸಲಾದ ಕಾಮಗಾರಿಗಳ ವೆಚ್ಚದ ದಾಖಲಾತಿಗಳನ್ನು ಪರಿಶೀಲಿಸಿ ಕಂಡುಬಂದ ಲೋಪದೋಷಗಳ ತನಿಖಾ ವರದಿಯನ್ನು ದಿನಾಂಕ:19-05-2005ರಂದು ತಯಾರಿಸಿದ್ದರೆಂಬುದು ಅವರ ಹೇಳಿಕೆಯಿಂದ ವ್ಯಕ್ತವಾಗುತ್ತದೆ. ಹಿರಿಯೂರು ತಾಲ್ಲೂಕಿನ ತಡೆಅಣೆ ಅರಣ್ಯ ಕಾಮಗಾರಿ, ನೆಡುತೋಪು ಕಾಮಗಾರಿ, ನಾಯಕರಕೊಟ್ಟಿಗೆ ತಡೆಅಣೆ ಎಸ್.ಆರ್.ಎಸ್.-6 ತಡೆಅಣೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ಪಡೆಯದೆ ಹಣ ಬಟವಾಡೆ ಮಾಡಿದ್ದಕ್ಕೆ ಹುಂಡಿಗಳನ್ನು ತಯಾರಿಸಿರಲಿಲ್ಲ. ಈ ನ್ಯೂನತೆಗಳಿಗೆ ಅರಣ್ಯಾಧಿಕಾರಿ ಜವಾಬ್ದಾರರೆಂದು ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ವಿಚಾರಣೆಯ ಕಾಲಕ್ಕೆ ತನ್ನ ಹೇಳಿಕೆಯಲ್ಲಿ ಶ್ರೀ ಪಾಂಡುರಂಗಪ್ಪ ಕಾಮಗಾರಿಗಳ ನಕ್ಷೆಗೆ ಅಂದಾಜು ಪತ್ರಿಕೆಗಳಿಗೆ ಮಂಜೂರಾತಿ ಪಡೆದಿರಲಿಲ್ಲ. ನಗದು ಪುಸ್ತಕ, ಅಳತೆ ಪುಸ್ತಕ ನಿರ್ವಹಿಸಿರಲಿಲ್ಲವೆಂದು ಈ ಕುರಿತು ಶ್ರೀ ಪಾಂಡುರಂಗಪ್ಪನವರ ಲಿಖಿತ ಹೇಳಿಕೆಯನ್ನು ಮತ್ತು ಸಂಬಂಧಪಟ್ಟ ರೈತರ ಹೇಳಿಕೆಯನ್ನು ಪಡೆದಿರುವುದಾಗಿ ಹೇಳಿದ್ದಾರೆ. ರಕ್ಷಣಾ ಸಹಾಯಕರ ಪಾಟೀ ಸವಾಲಿನಲ್ಲಿ ಶ್ರೀ ಪಾಂಡುರಂಗಪ್ಪ ತಪಾಸಣೆ ಸಮಯದಲ್ಲಿ ಚಿತ್ರದುರ್ಗ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ವಲಯ ಅರಣ್ಯಾಧಿಕಾರಿಯೆಂದು ಕರ್ತವ್ಯ ನಿರ್ವಹಿಸುತ್ತಿದ್ದರೆಂಬುದನ್ನು ಒಪ್ಪಿಕೊಂಡಿದ್ದಾರೆ. ಆರೋಪಿತ ಅಧಿಕಾರಿ ಯಾವ ಯಾವ ಕಾಮಗಾರಿಗಳನ್ನು ಮಾಡಿಸಿದ್ದರೆಂಬ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಿದಾಗ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾಖಲೆಗಳನ್ನು ಕೊಡದೆ ಇದ್ದುದರಿಂದ ಭೌತಿಕವಾಗಿ ಕಾಮಗಾರಿಗಳ ಪರಿಶೀಲನೆ ಮಾಡಿಲ್ಲವೆಂದು ಒಪ್ಪಿದ್ದಾರೆ. ಪಾಂಡುರಂಗಪ್ಪ ತನ್ನ ರಕ್ಷಣೆಯಲ್ಲಿ ನೀಡಿದ ಹೇಳಿಕೆಯಲ್ಲಿ ಮಂಜೂರಾತಿ ಪಡೆದ ಅಂದಾಜು ಪತ್ರಿಕೆ ಅಳತೆ ಪುಸ್ತಕ ಮತ್ತು ಲೆಕ್ಕಪತ್ರಗಳನ್ನು ಸಂಬಂಧಪಟ್ಟ ಜಲಾನಯನ ಸಂಘಗಳಿಗೆ ಸಲ್ಲಿಸಿದ್ದೆ ಎಂದು ಹೇಳಿದ್ದಾರೆ. ತನಿಖೆಯ ಸಂದರ್ಭದಲ್ಲಿ ಆರೋಪಿತ ಅಧಿಕಾರಿಗೆ ಶ್ರೀ ರಾಜಣ್ಣನವರು ದಾಖಲೆಗಳನ್ನು ಹಾಜರುಪಡಿಸಲು ಕೇಳಿದಾಗ ಅವರು ಹಾಜರು ಪಡಿಸಲಿಲ್ಲವೆಂದು ಹೇಳಿದ್ದಾರೆ. ಸಂಬಂಧಪಟ್ಟ ಜಲಾನಯನ ಸಂಘಗಳಿಗೆ ಭೇಟಿ ಕೊಟ್ಟು ಸಮಗ್ರ

ದಾಖಲೆಗಳನ್ನು ಹಾಜರು ಪಡಿಸಿಕೊಂಡು ಪರಿಶೀಲಿಸಿದ ಆರೋಪಿತ ಅಧಿಕಾರಿ ದಾಖಲೆಗಳನ್ನು ಹಾಜರು ಮಾಡಲಿಲ್ಲವೆಂದು ಹಾರಿಕೆ ಉತ್ತರ ನೀಡಿದ್ದು, ಸ್ಪಷ್ಟವಾಗಿದೆ ಎಂಬುದಾಗಿ ವರದಿ ನೀಡಿದ್ದಾರೆ.

ಹಿಂಡಸಗಟ್ಟೆ ತಡೆ ಆಣೆ -8, ದೇವರ ಮರಿ ಕುಂಟೆ ತಡೆಆಣೆ-1, ನಾಗಗೊಂಡನಹಳ್ಳಿ ತಡೆಆಣೆ -9 ಎಸ್.ಆರ್.ಎಸ್.-1, ಬಾಲೇನಹಳ್ಳಿ ಎಸ್.ಆರ್.ಎಸ್.-4, ಪರಮೇನಹಳ್ಳಿ ಬದು ಕಾಮಗಾರಿ, ಬಾಲೇನಹಳ್ಳಿ ಸಮಪಾತಾಳಿ ಬದು-7, ದೇವರ ಮರಿಕುಂಟೆ ಬದು ಕಾಮಗಾರಿ-2, ಪರಮೇನಹಳ್ಳಿ ಎಸ್.ಆರ್.ಎಸ್-3, ಆನೆಸಿದ್ರಿ ಎಸ್.ಆರ್.ಎಸ್.-4, ನಾಯಕನಕೊಟ್ಟಿಗೆ ಎಸ್.ಆರ್.ಎಸ್.-5 ಮತ್ತು 6 ಪಿಲಾಜನಹಳ್ಳಿ ಬದು ಕಾಮಗಾರಿ-1, ವೀರವ್ವ ನಾಗತಿಹಳ್ಳಿ ತಡೆಆಣೆ-3 ಮತ್ತು 4 ಕಾಮಗಾರಿಗಳನ್ನು ಪರಿಶೀಲಿಸಿ ತನಿಖಾ ವರದಿ ತಯಾರಿಸಿ ಅದರಲ್ಲಿ ತನಿಖಾಧಿಕಾರಿಯವರ ವರದಿಯನ್ನು ಪರಿಶೀಲಿಸಿದಾಗ ಅವರು ಕಾಮಗಾರಿಗಳ ತನಿಖೆಯನ್ನು ಮಳೆಗಾಲದಲ್ಲಿ ಕೈಗೊಂಡಿದ್ದಾರೆಂಬುದು ಸ್ಪಷ್ಟವಾಗಿದೆ. ಸ್ಥಳ ಸೂಕ್ತತೆ ಇಲ್ಲದೆ ಇದ್ದರೂ ಅಂದಾಜು ಪತ್ರಿಕೆಗಳಲ್ಲಿ ಕಾಮಗಾರಿಗಳಿಗೆ ಸೂಕ್ತವಾದ ಸ್ಥಳಗಳನ್ನು ಪ್ರಾಮಾಣೀಕರಿಸುವುದು ಮತ್ತು ಕಾಮಗಾರಿಗಳ ಗುಣಮಟ್ಟ ಕಾಪಾಡುವ ಬಗ್ಗೆ ಕಾಮಗಾರಿಗಳನ್ನು ಆರಂಭಿಸಿದಾಗ ಮೇಲಾಧಿಕಾರಿಗಳು ಕಾಲಕಾಲಕ್ಕೆ ಪ್ರವಾಸ ಕೈಗೊಂಡು ಮಾರ್ಗದರ್ಶನ ನೀಡದೇ ಇರುವುದರಿಂದ ತಪಾಸಣೆ ಕೈಗೊಂಡ ನಿಕಟ ಪೂರ್ವದಲ್ಲಿ ಮಳೆ ಬಿದ್ದಿರುವುದನ್ನು ತನಿಖೆ ವರದಿಯಲ್ಲಿ ಒಪ್ಪಿಕೊಂಡಿರುವುದರಿಂದ ಅನುಷ್ಠಾನಗೊಳಿಸಿದ ಕಾಮಗಾರಿಗಳು ಮಳೆಯಲ್ಲಿ ಕೊಚ್ಚಿಕೊಂಡು ಹೋಗಿರುವ ಸಾಧ್ಯತೆ ಇತ್ತೆಂದು ವಿಚಾರಣಾಧಿಕಾರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಆರೋಪಿತ ಪರ ಅಧಿಕಾರಿಗಳ ರಕ್ಷಣಾ ಸಹಾಯಕರು, ವಾದವನ್ನು ಪುರಸ್ಕರಿಸುತ್ತೇನೆಂದು ತಮ್ಮ ನಿರ್ಣಯ ನೀಡಿ ಅರೋಪಿತರ ಆಪಾದನೆಗಳು ರುಜುವಾತ ವಾಗುವುದಿಲ್ಲವೆಂದು ವರದಿ ನೀಡಿರುತ್ತಾರೆ.

ವಿಚಾರಣಾಧಿಕಾರಿಯವರ ಮೇಲ್ಕಂಡ ವರದಿಯಂತೆ ಪ್ರಕರಣದಲ್ಲಿ ವಿಚಾರಣೆಗೆ ಗುರಿಪಡಿಸಲಾದ ಆಪಾದಿತರ ವಿರುದ್ಧದ ಆಪಾದನೆಗಳನ್ನು ಸಾಬೀತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರದ ಪರ ಸಾಕ್ಷಿದಾರರು ವಿಫಲರಾಗಿರುವ ಹಿನ್ನಲೆಯಲ್ಲಿ ವಿಚಾರಣಾಧಿಕಾರಿಯವರ ವರದಿಯನ್ನು ಒಪ್ಪಿ ಪ್ರಕರಣದ ಆಪಾದಿತರ ವಿರುದ್ಧದ ಆಪಾದನೆಗಳಿಂದ ಅವರುಗಳನ್ನು ಮುಕ್ತರನ್ನಾಗಿ ಮಾಡಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಕೃಇ 72 ಕೃಪವಿ 2006</u>**

**<u>ಬೆಂಗಳೂರು, ದಿನಾಂಕ: 07/11/2012.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನಲೆಯಲ್ಲಿ ವಿಚಾರಣಾಧಿಕಾರಿಗಳ ವರದಿಯನ್ನು ಒಪ್ಪಿ ವಿಚಾರಣೆಗೆ ಗುರಿಪಡಿಸಲಾದ ಈ ಕೆಳಕಂಡ ಅಧಿಕಾರಿ/ನೌಕರರುಗಳೆಲ್ಲರನ್ನೂ ಅವರ ಮೇಲಿನ ಆರೋಪಗಳಿಂದ ಮುಕ್ತರನ್ನಾಗಿ ಮಾಡಿ ಆದೇಶಿಸಿದೆ.

1) ಶ್ರೀ ಎಂ.ಅಸ್ಲಂ, ಕೃಷಿ ಅಧಿಕಾರಿ,
2) ಶ್ರೀ ಜಿ. ಶ್ರೀಕಂಠನ್, ಕೃಷಿ ಅಧಿಕಾರಿ(ನಿವೃತ್ತ)

3) ಶ್ರೀ ಎಂ.ಪಾಂಡುರಂಗಪ್ಪ, ವಲಯ ಅರಣ್ಯಾಧಿಕಾರಿ,
4) ಶ್ರೀ ಕೆ.ಬಿ ರಾಮಸ್ವಾಮಿ, ಸಹಾಯಕ ಕೃಷಿ ಅಧಿಕಾರಿ(ನಿವೃತ್ತ)
5) ಶ್ರೀ ಕೆ.ಎಸ್. ಜಯಕುಮಾರ್, ಕೃಷಿ ಸಹಾಯಕ,
6) ಶ್ರೀ ಮುದ್ದುಕೃಷ್ಣಪ್ಪ, ಕೃಷಿ ಸಹಾಯಕ,
7) ಶ್ರೀ ಗೌಸ್ ಮೊಹಿದ್ದೀನ್, ಸಹಾಯಕ ಕೃಷಿ ಅಧಿಕಾರಿ(ಈಗ ನಿವೃತ್ತ)
8) ಶ್ರೀ ಕೆ. ದಾಸೇಗೌಡ, ಕೃಷಿ ಸಹಾಯಕ(ಈಗ ನಿವೃತ್ತ).
9) ಶ್ರೀ ಚಿಕ್ಕಲಿಂಗೇಗೌಡ, ಕೃಷಿ ಸಹಾಯಕ,
10) ಶ್ರೀ ಹೆಚ್. ಮುಸ್ಟೂರಪ್ಪ, ಕೃಷಿ ಸಹಾಯಕ,
11) ಶ್ರೀ ಸಿ. ಓಂಕಾರಯ್ಯ, ಕೃಷಿ ಸಹಾಯಕ,

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಎಜಿ–5 ಮಹಾಲೇಖಪಾಲರ ಕಛೇರಿ, (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಹೊಸಕಟ್ಟಡ, ಬೆಂಗಳೂರು–1.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಶ್ರೀ ಪ್ರಹ್ಲಾದಾಚಾರ್ಯ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಶ್ರೀವಾಸ್ತ, ನಂ–42/13, ಕಾಮಕ್ಯ ಮೈನ್ ರೋಡ್, 4ನೇ ಕ್ರಾಸ್, 5ನೇ ಬ್ಲಾಕ್, ಬನಶಂಕರಿ 3ನೇ ಹಂತ. ಬೆಂಗಳೂರು
5. ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ, (ಮುಖ್ಯಸ್ಥರು, ಅರಣ್ಯಪಡೆ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003,
6. ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,(ಸೇವೆಗಳು) ಬೆಂಗಳೂರು,
7. ಜಂಟಿ ಕೃಷಿ ನಿರ್ದೇಶಕರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಚಿತ್ರದುರ್ಗ.
8. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಚಿತ್ರದುರ್ಗ.
9. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ, ವಿಕಾಸ ಸೌಧ, ಬೆಂಗಳೂರು.
10. ಸಂಬಂಧಪಟ್ಟ ಅಧಿಕಾರಿಯವರಿಗೆ. (ಆಯುಕ್ತರ ಮುಖಾಂತರ).
11. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
12. ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಸಹಾಯಕರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.